ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	654(814)
ಉತ್ತರಿಸುವ ದಿನಾಂಕ	:	25-09-2020
ಉತ್ತರಿಸುವ ಸಚಿವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2019-20ನೇ ಸಾಲಿನಲ್ಲಿ ಕಾರಣಾಂತರಗಳಿಂದ ರಾಜ್ಯ ಖಜಾನೆಯು ಬೇಗ ಮುಚ್ಚಲ್ಪಟ್ಟಿದ್ದರಿಂದ – ಗದಗ, ಹಾವೇರಿ ಹಾಗೂ ಧಾರವಾಡ ಜಿಲ್ಲೆಗಳ, ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ಗಳ ಒಟ್ಟು ಎಷ್ಟು ಅನುದಾನ ಬಾಕಿ ಉಳಿದಿದೆ</td><td>
<table>
<tr><th rowspan="2">ಜಿಲ್ಲಾ ಪಂಚಾಯಿತಿ</th><th colspan="2">ಬಾಕಿ ಉಳಿದಿರುವ ಅನುದಾನ (ರೂ ಲಕ್ಷಗಳಲ್ಲಿ)</th></tr>
<tr><th>ಜಿಲ್ಲಾ ಪಂಚಾಯಿತಿ</th><th>ತಾಲ್ಲೂಕು ಪಂಚಾಯಿತಿ</th></tr>
<tr><td>ಗದಗ</td><td>₹ 2239.22</td><td>₹ 291.37</td></tr>
<tr><td>ಹಾವೇರಿ</td><td>₹ 1844.72</td><td>₹ 399.74</td></tr>
<tr><td>ಧಾರವಾಡ</td><td>₹ 3921.18</td><td>₹ 435.86</td></tr>
</table>
</td></tr>
<tr><td>ಆ)</td><td>2019-20ನೇ ಸಾಲಿನಲ್ಲಿ ರಾಜ್ಯ ಖಜಾನೆಯು ನಿಗದಿತ ಸಮಯಕ್ಕಿಂತ ಮೊದಲು ಬಂದ್ ಆಗಲು ಕಾರಣವೇನು ?</td><td>ವರ್ಷಾಂತ್ಯದ ಬಿಲ್ಲುಗಳನ್ನು ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ಕಾಲಮಿತಿ ಸೂಚಿಸಿ ವೇಳಾಪಟ್ಟಿಯನ್ನು ಪ್ರತಿ ವರ್ಷ ಆರ್ಥಿಕ ಇಲಾಖೆಯು ಆದೇಶದ ಮೂಲಕ ನಿಗದಿಪಡಿಸುತ್ತದೆ. ಅದರಂತೆ, 2019-20ನೇ ಸಾಲಿಗೂ ವೇಳಾಪಟ್ಟಿಯನ್ನು ದಿನಾಂಕ: 08.01.2020ರ ಸರ್ಕಾರದ ಆದೇಶ ಸಂಖ್ಯೆ : ಆಇ 01 ಬಿಪಿಇ 2020 ರನ್ವಯ ನಿಗದಿಪಡಿಸಲಾಗಿದೆ. (ಅನುಬಂಧ-1 ಲಗತ್ತಿಸಿದೆ.) ಎಲ್ಲಾ ಖಜಾನೆಗಳು ಆರ್ಥಿಕ ಇಲಾಖೆಯು ಹೊರಡಿಸಿರುವ ಆದೇಶದನುಸಾರ ಕಾರ್ಯನಿರ್ವಹಿಸಿರುತ್ತವೆ. ನಿಗದಿತ ಸಮಯಕ್ಕಿಂತ ಮೊದಲು ಯಾವುದೇ ಖಜಾನೆಗಳು ಮುಚ್ಚಲ್ಪಟ್ಟಿರುವುದಿಲ್ಲ.</td></tr>
</table>

ಇ)	ಬಾಕಿ ಉಳಿದಿರುವ ಅನುದಾನ ಪುನ: ಬಿಡುಗಡೆಗೊಳಿಸಲಾಗುವುದೇ ಬಾಕಿ ಅನುದಾನ ಬಿಡುಗಡೆಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?	2019-20ನೇ ಸಾಲಿನಲ್ಲಿ ಬಾಕಿ ಉಳಿದ ಅನುದಾನಗಳು ಆ ವರ್ಷದಲ್ಲೇ ಲ್ಯಾಪ್ಸ್ ಆಗಿದ್ದು, ಸದರಿ ಅನುದಾನಗಳನ್ನು ಆ ವರ್ಷದಲ್ಲೇ ಅಧ್ಯರ್ಪಣೆ ಮಾಡಲಾಗಿರುವುದರಿಂದ ಪುನ: ಅನುದಾನ ಬಿಡುಗಡೆ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸರ್ಕಾರಿ ಆದೇಶ ಸಂ: ಆಇ 2 ಟಿಎಫ್‌ಪಿ 2020 ದಿ: 30.05.2020ರ ಅಧಿಕಾರ ಪ್ರತ್ಯಾಯೋಜನೆ ಪ್ರಕಾರ ಆಡಳಿತ ಇಲಾಖೆಗೆ ಅನುದಾನವನ್ನು ಬಿಡುಗಡೆ ಮಾಡುವ ಅಧಿಕಾರವನ್ನು ಪ್ರತ್ಯಾಯೋಜಿಸಿರುವ ಯೋಜನೆಗಳಲ್ಲಿ ಲಭ್ಯವಿರುವ ಅನುದಾನವನ್ನು ಬಾಕಿ ಇರುವ ಬಿಲ್ಲುಗಳನ್ನು ತೀರುವಳಿ ಮಾಡಲು ಮೊದಲ ಆದ್ಯತೆ (Clearance of pending bills) ನೀಡತಕ್ಕದು. ಹಾಗೆಯೇ, ಹಿಂದಿನ ವರ್ಷಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವರಿಗೆ ಇನ್ನು ಅನುದಾನವು ಒದಗಿಸಲು ಬಾಕಿಯಿದ್ದಲ್ಲಿ ಅವರಿಗೆ ಮೊದಲ ಆದ್ಯತೆ ನೀಡತಕ್ಕದು. (ಅನುಬಂಧ-2 ಲಗತ್ತಿಸಿದೆ.)

ಕಡತ ಸಂಖ್ಯೆ : ಆರ್‌ಡಿಪಿಆರ್ 51 ಎಯುಡಿ 2020

(signature)

(ಕೆ.ಎಸ್ ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಅನುಬಂಧ- 1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಖಜಾನೆಗಳಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2019, ದಿನಾಂಕ:14-01-2019 ಮತ್ತು ದಿನಾಂಕ:13-03-2019.

2. ಆಯುಕ್ತರು, ಖಜಾನೆ ಇಲಾಖೆ ಇವರ ಪತ್ರ ಸಂಖ್ಯೆ: ಖನಿ.ಪ್ರಕ್ರಿಯೆ/73/ 2019-20, ದಿನಾಂಕ:21-12-2019.

* * * * *

ಪ್ರಸ್ತಾವನೆ:-

2018-19ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿನಾಂಕ:31-3-2019ರಂದೇ 2018-19ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ಕಾಲಮಿತಿ ಸೂಚಿಸಿ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿತ್ತು. ಸದರಿ ವೇಳಾಪಟ್ಟಿಯಂತೆ ಇಲಾಖಾ ಅಧಿಕಾರಿಗಳು ಹಾಗೂ ಖಜಾನಾಧಿಕಾರಿಗಳು ಸೂಕ್ತ ಕ್ರಮ ಕೈಗೊಂಡಿದ್ದು ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ.

2019-20ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಸಹ ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿನಾಂಕ:30-3-2020ರಂದೇ 2019-20ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಸೂಕ್ತ ವೇಳಾಪಟ್ಟಿಯನ್ನು ನೀಡಿ ಸಾಕಷ್ಟು ಮುಂಚಿತವಾಗಿ ಆದೇಶವನ್ನು ಹೊರಡಿಸುವುದು ಅವಶ್ಯವಿದೆಯೆಂದು ಖಜಾನೆ ಆಯುಕ್ತರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರವನ್ನು ಕೋರಿದ್ದಾರೆ. ಆದ್ದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2020, ಬೆಂಗಳೂರು, ದಿನಾಂಕ: 08-01-2020

ಎ) ಆಡಳಿತ ಇಲಾಖೆಗಳ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ನಿಗದಿಗೊಳಿಸಿರುವ ಕಾಲಮಿತಿ.

ಕ್ರಮ ಸಂಖ್ಯೆ	ಬಿಲ್ಲುಗಳ ಸ್ವರೂಪ/ವಿವರಗಳು	31-01-2020ರೊಳಗೆ ಬಿಡುಗಡೆ ಆದೇಶಗಳನ್ನು ಹೊರಡಿಸಿ **upload** ಆಗಿರುವ ವೆಚ್ಚಗಳಿಗೆ ಸಂಬಂಧಿಸಿದಂತೆ ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ	31-01-2020ರ ನಂತರ ಬಿಡುಗಡೆ ಮಾಡುವ ಹಾಗೂ ಆಗುವ ವೆಚ್ಚಗಳಿಗೆ ಸಂಬಂಧಿಸಿದಂತೆ

			ಹಣ ಬಿಡುಗಡೆ/ upload ಮಾಡಲು ಕಡೆಯ ದಿನಾಂಕ	ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ
1	2	3	4	5
1	ವೇತನ / ವೇತನ ಬಾಕಿ ಬಿಲ್ಲುಗಳು/ಹಬ್ಬದ ಮುಂಗಡ ಬಿಲ್ಲು/ ಅನುದಾನಿತ ವೇತನ ಬಿಲ್ಲುಗಳು.	14-02-2020	09-03-2020	12-03-2020
2	ಕಛೇರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಸಾದಿಲ್ವಾರು ಬಿಲ್ಲುಗಳು/ಪ್ರಯಾಣ ಭತ್ಯೆ ಬಿಲ್ಲುಗಳು.	16-02-2020	09-03-2020	12-03-2020
3	EAP ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ಯೋಜನೆ ಹೊರತುಪಡಿಸಿ ಇತರೆ ಯೋಜನೆಗಳಿಗೆ ಸಂಬಂಧಿಸಿದಂತೆ ಸಾದಿಲ್ವಾರು ಬಿಲ್ಲುಗಳು ಹಾಗೂ ವೇತನೇತರ ಸಹಾಯಾನುದಾನ ಬಿಲ್ಲುಗಳು.	20-02-2020	20-03-2020	23-03-2020
4	ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಹಾಗೂ **EAP,** ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ಯೋಜನೆ ಬಿಲ್ಲುಗಳು.	13-03-2020	–	20-03-2020
5	ಏಪ್ರಿಲ್ ತಿಂಗಳಲ್ಲಿ ಪಾವತಿಯಾಗುವ ಮಾರ್ಚ್ ತಿಂಗಳ ವೇತನ/ವೇತನ ಅನುದಾನಿತ ಬಿಲ್ಲುಗಳು.	-	02-04-2020 ರ ನಂತರ	
6	ಇಲಾಖೆಗಳು ಹಾಗೂ ಸಚಿವಾಲಯದ ಆಡಳಿತ ಇಲಾಖೆಗಳು ಹೊರಡಿಸುವ ಪುನರ್ವಿನಿಯೋಗದ ಬಿಲ್ಲುಗಳು.	-	-	16-03-2020
7	ವಿದ್ಯುಚ್ಛಕ್ತಿ, ದೂರವಾಣಿ ಹಾಗೂ ಕಟ್ಟಡ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳು.	-	-	05-03-2020
8	ಪೂರಕ ಅಂದಾಜು-2 ರಲ್ಲಿ ಸಕ್ರಮಗೊಳಿಸುವ ಹೆಚ್ಚುವರಿ ಆದೇಶದ	–	13-03-2020	20-03-2020

ಕ್ರಮ ಸಂಖ್ಯೆ	ಬಿಲ್ಲುಗಳ ಸ್ವರೂಪ/ವಿವರಗಳು	31-01-2020ರೊಳಗೆ ಬಿಡುಗಡೆ ಆದೇಶಗಳನ್ನು ಹೊರಡಿಸಿ **upload** ಆಗಿರುವ ವೆಚ್ಚಗಳಿಗೆ ಸಂಬಂಧಿಸಿದಂತೆ ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ	31-01-2020ರ ನಂತರ ಬಿಡುಗಡೆ ಮಾಡುವ ಹಾಗೂ ಆಗುವ ವೆಚ್ಚಗಳಿಗೆ ಸಂಬಂಧಿಸಿದಂತೆ	
			ಹಣ ಬಿಡುಗಡೆ/ upload ಮಾಡಲು ಕಡೆಯ ದಿನಾಂಕ	ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ
1	2	3	4	5
	ಬಿಲ್ಲುಗಳು.			
9	ಪೂರಕ ಅಂದಾಜು-2 ರಲ್ಲಿ ಒದಗಿಸಿರುವ ಅನುದಾನದ ಬಿಲ್ಲುಗಳು	-	13-03-2020	23-03-2020
10	**ZP/TP** ಗೆ ಸಂಬಂಧಿಸಿದ ಎಲ್ಲಾ **upload** ಗಳು	-	20-03-2020	

ಬಿ) ಆಡಳಿತ ಇಲಾಖೆಗಳಿಗೆ ಸೂಚನೆಗಳು:-

1. ದಿನಾಂಕ:30-03-2020ರ ಅಪರಾಹ್ನ 2.30 ಘಂಟೆಯ ನಂತರ ಯಾವುದೇ ಬಿಲ್ಲುಗಳನ್ನು ಖಜಾನೆಗಳಿಗೆ ಸಲ್ಲಿಸುವುದನ್ನು ನಿರ್ಬಂಧಿಸಲಾಗಿದೆ.

2. ಇಲಾಖಾ ಮುಖ್ಯಸ್ಥರು ಮತ್ತು ಅವರುಗಳ ಹಣ ಪಡೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಈ ಆದೇಶದಲ್ಲಿ ತಿಳಿಸಿರುವ ವೇಳಾ ಪಟ್ಟಿಯಂತೆ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಆರ್ಥಿಕ ಮಿತವ್ಯಯ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

3. ಸರ್ಕಾರದ ಆದೇಶ ಸಂಖ್ಯೆ: ಆಇ 2 ಟಿಎಫ್‌ಸಿ 2004, ದಿನಾಂಕ:09-09-2004ರಲ್ಲಿ ತಿಳಿಸಿರುವ ಸೂಚನೆಗಳನ್ನು ಸಹ ಗಮನದಲ್ಲಿಟ್ಟುಕೊಂಡು ಮೇಲೆ ಹೇಳಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತವನ್ನು ದಿನಾಂಕ:31-03-2020 ರೊಳಗೆ ವೆಚ್ಚ ಮಾಡತಕ್ಕದ್ದು.

4. ಕ್ರಮ ಸಂಖ್ಯೆ-4ಕ್ಕೆ ಸಂಬಂಧಿಸಿದಂತೆ ಕಾಲೇಜು ಶಿಕ್ಷಣ, ತಾಂತ್ರಿಕ ಶಿಕ್ಷಣ, ಪದವಿ ಪೂರ್ವ ಶಿಕ್ಷಣ,

ಅಂಗವಿಕಲರ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ವಿದ್ಯಾರ್ಥಿ ವೇತನದ ಫಲಾನುಭವಿಗಳ ಪಟ್ಟಿಯನ್ನು ಸಾಕಷ್ಟು ಮುಂಚಿತವಾಗಿ ಡಿಡಿಓ ಗಳು ತಯಾರಿಸತಕ್ಕದ್ದು.

5. ಖಜಾನೆ–2 ರಲ್ಲಿ ಬಿಲ್ಲುಗಳನ್ನು ಸಲ್ಲಿಸುವ ಹಣ ಸೆಳೆಯುವ ಬಟವಾಡೆ ಅಧಿಕಾರಿಗಳು ಮೇಲೆ ಉಲ್ಲೇಖಿಸಿದ ದಿನಾಂಕದೊಳಗೆ ಆನ್‌ಲೈನ್‌ನಲ್ಲಿ ಮತ್ತು ಭೌತಿಕವಾಗಿ ಬಿಲ್ಲುಗಳನ್ನು ಸಲ್ಲಿಸತಕ್ಕದ್ದು.

6. ಖಜಾನೆ–2 ಪಿ.ಆರ್.ಐ. ಮಾಡ್ಯೂಲ್ ಅನುಷ್ಠಾನಗೊಂಡಿರುವ ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್ ಗಳ ಸಂಬಂಧ ವೆಚ್ಚವಾಗದೆ ಇರುವ 2019–20ರ ಅನುದಾನವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಲು ಅನುಕೂಲವಾಗುವಂತೆ ದಿನಾಂಕ:30–03–2020 ರಂದು ಬಿಲ್ಲನ್ನು ಸಲ್ಲಿಸುವಂತೆ ಅವಕಾಶ ಕಲ್ಪಿಸಲಾಗಿದೆ.

ಸಿ) ಖಜಾನೆಗಳಿಗೆ ಸೂಚನೆಗಳು:–

1. ಎಲ್ಲಾ ಖಜಾನೆಗಳಲ್ಲಿ ಲೆಕ್ಕಗಳನ್ನು ಅಂತಿಮಗೊಳಿಸಲು ಅನುಕೂಲವಾಗುವಂತೆ ದಿನಾಂಕ:01–04–2020 ನ್ನು ವ್ಯವಹಾರ ರಹಿತ ದಿನವನ್ನಾಗಿ ಘೋಷಿಸಲಾಗಿದೆ.

2. ಖಜಾನೆಗಳು ಮಾರ್ಚ್ 2020ರ ಲೆಕ್ಕಗಳನ್ನು 31ನೇ ಮಾರ್ಚ್ 2020ರ ನಂತರವೂ ತೆರೆದಿರಕೂಡದೆಂದು ಸೂಚಿಸಲಾಗಿದೆ.

3. ಮಹಾಲೇಖಪಾಲರು (ಎ ಮತ್ತು ಇ)ರವರು 2019–20ರ ತಾತ್ಕಾಲಿಕ ಲೆಕ್ಕಗಳನ್ನು 10ನೇ ಮೇ 2020ರೊಳಗಾಗಿ ಸರ್ಕಾರಕ್ಕೆ ಕಳುಹಿಸಲು ಅನುವಾಗುವಂತೆ ಖಜಾನಾಧಿಕಾರಿಗಳು ನಿಗದಿತ ಸಮಯದೊಳಗೆ ಮಹಾಲೇಖಪಾಲರಿಗೆ ಮಾರ್ಚ್ 2020ರ ಲೆಕ್ಕಗಳನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ,

(ಪವನ್ ಕುಮಾರ್ ಮಾಲಪಾಟಿ)

ಸರ್ಕಾರದ ಉಪ ಕಾರ್ಯದರ್ಶಿ (ಆಯವ್ಯಯ & ಸಂಪನ್ಮೂಲ)

ಆರ್ಥಿಕ ಇಲಾಖೆ

ಇವರಿಗೆ:-

1) ಮಹಾಲೇಖಪಾಲರು (A&E)/(G&SSA)/(E&RSA), ಕರ್ನಾಟಕ, ಬೆಂಗಳೂರು.
2) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು.
3) ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.
4) ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.
5) ಸರ್ಕಾರದ ಎಲ್ಲಾ ಅಪರ/ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
6) ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
7) ಲೋಕಾಯುಕ್ತರು, ಕರ್ನಾಟಕ, ಬೆಂಗಳೂರು.
8) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
9) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-9.
10) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು /ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
11) ಆಯುಕ್ತರು, ಖಜಾನೆ ಇಲಾಖೆ, ಬೆಂಗಳೂರು.
12) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
13) ಎಲ್ಲಾ ಇಲಾಖಾ ಮುಖ್ಯಸ್ಥರು.
14) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿಗಳು.

ಅನುಬಂಧ-2

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:–2020–21ನೇ ಸಾಲಿನಲ್ಲಿ ಜೂನ್ ರಿಂದ ನವೆಂಬರ್ ವರೆಗೆ 6 ತಿಂಗಳಿಗೆ ಹಣ ಬಿಡುಗಡೆ ಮಾಡಲು ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಬಗ್ಗೆ.

ಓದಲಾಗಿದೆ:–

1. ಸರ್ಕಾರದ ಆದೇಶ ಸಂಖ್ಯೆ: ಆಇ 11 ಟಿಎಫ್‌ಪಿ 2007 ದಿನಾಂಕ: 27.11.2007
2. ಸರ್ಕಾರದ ಆದೇಶ ಸಂಖ್ಯೆ: ಪಿಡಿ 14 ಐಎಂಎಂ 2017, ದಿನಾಂಕ: 23.03.2017.
3. ಸರ್ಕಾರದ ಆದೇಶ ಸಂಖ್ಯೆ: ಆಇ 2 ಟಿಎಫ್‌ಪಿ 2020, ದಿನಾಂಕ: 01.04.2020.
4. ಸರ್ಕಾರದ ಆದೇಶ ಸಂಖ್ಯೆ: ಆಇ 2 ಟಿಎಫ್‌ಪಿ 2020, ದಿನಾಂಕ: 28.04.2020

ಪ್ರಸ್ತಾವನೆ:–

ಕಾಲಕಾಲಕ್ಕೆ ಹೊರಡಿಸಲಾಗುವ ಸರ್ಕಾರದ ಆದೇಶಗಳ ಮೂಲಕ ಆಡಳಿತ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳಿಗೆ ಹಣ ಬಿಡುಗಡೆ ಮಾಡಲು ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗುತ್ತಿದೆ.

ಕೋವಿಡ್ –19 ರಿಂದಾಗಿ ರಾಜ್ಯಾದ್ಯಂತ ಲಾಕ್‌ಡೌನ್ ಮಾಡಿದ್ದರಿಂದ ಉಂಟಾದ ಪರಿಸ್ಥಿತಿಯಿಂದಾಗಿ ರಾಜ್ಯದ ರಾಜಸ್ವ ತೀವ್ರವಾಗಿ ಕುಂಠಿತಗೊಂಡಿದೆ. ಇದರಿಂದಾಗಿ ಹಿಂದಿನ ಪದ್ಧತಿಯಂತೆ, ತ್ರೈಮಾಸಿಕ ಕಂತುಗಳ ಬಿಡುಗಡೆಗಾಗಿ ಅಧಿಕಾರ ಪ್ರತ್ಯಾಯೋಜನೆ ಮಾಡುವ ಬದಲು ಏಪ್ರಿಲ್ ಮತ್ತು ಮೇ ತಿಂಗಳಿಗೆ ಮಾತ್ರ ಅಧಿಕಾರ ಪ್ರತ್ಯಾಯೋಜನೆ ಆದೇಶವನ್ನು ಮೇಲೆ (2) ಮತ್ತು (3)ರಲ್ಲಿ ಓದಲಾದದಂತೆ ಹೊರಡಿಸಲಾಗಿತ್ತು. ರಾಜ್ಯದ ಮಾಸಿಕ ರಾಜಸ್ವ ಸಂಗ್ರಹಣೆಯು ಅಂದಾಜಿಸಿರುವ ಹಂತವನ್ನು ತಲುಪಲು ಇನ್ನಷ್ಟು ಕಾಲಾವಕಾಶ ಬೇಕಾಗಿರುವುದರಿಂದ ಅತ್ಯಾವಶ್ಯಕ ವೆಚ್ಚಗಳಾದ ವೇತನ, ಪಿಂಚಣಿ, ಸಾಮಾಜಿಕ ಭದ್ರತಾ ಪಿಂಚಣಿ, ಆಹಾರ ಭದ್ರತೆ ಮತ್ತು ಮೂಲ ಆಡಳಿತಾತ್ಮಕ ವೆಚ್ಚ ಹಾಗೂ ಕೆಲವು ಅಗತ್ಯ ಯೋಜನೆಗಳಿಗೆ ಸಂಬಂಧಿಸಿದಂತೆ ಮಾತ್ರ ವೆಚ್ಚವನ್ನು ಭರಿಸಲು ಅಧಿಕಾರ ಪ್ರತ್ಯಾಯೋಜನೆ ಮಾಡುವುದು ಅಗತ್ಯವಾಗಿದೆ. ಇತರೆ ಪ್ರತ್ಯಾಯೋಜನೆ ಮಾಡಿರದ ಯೋಜನೆಗಳಿಗೆ ಮತ್ತು 2020–21ನೇ ಸಾಲಿನ ಹೊಸ ಯೋಜನೆಗಳಿಗೆ ಆರ್ಥಿಕ ಇಲಾಖೆಯ ಅನುಮೋದನೆ ಪಡೆಯುವುದು ಅಗತ್ಯವಾಗಿದೆ. ಆದ್ದರಿಂದ ಒಟ್ಟು ಆಯವ್ಯಯ ಅಂದಾಜಿನ ಅರ್ಧದಷ್ಟು ಮೊತ್ತವನ್ನು ಜೂನ್‌ನಿಂದ ನವೆಂಬರ್ ವರೆಗೆ 6 ತಿಂಗಳಿಗೆ ಬಿಡುಗಡೆ ಮಾಡಲು ಈ ಅಧಿಕಾರ ಪ್ರತ್ಯಾಯೋಜನೆಯ ಆದೇಶವನ್ನು ಹೊರಡಿಸಿದೆ.

ಈ ಆದೇಶವು, 2020-21ನೇ ಸಾಲಿಗೆ ರಾಜಸ್ವ ವೆಚ್ಚ ಮತ್ತು ಬಂಡವಾಳ ವೆಚ್ಚಗಳನ್ನು ಬಿಡುಗಡೆ ಮಾಡುವುದಕ್ಕೆ ಅನ್ವಯವಾಗುತ್ತದೆ. ಈ ಆದೇಶದಲ್ಲಿರುವ ಅಧಿಕಾರ ಪ್ರತ್ಯಾಯೋಜನೆಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು ಚಲಾಯಿಸತಕ್ಕದ್ದೇ ಹೊರತು ಪುನರ್ ಪ್ರತ್ಯಾಯೋಜನೆ ಮಾಡತಕ್ಕದ್ದಲ್ಲ.

ಸರ್ಕಾರದ ಆದೇಶ ಸಂ:ಎಫ್‌ಡಿ 2 ಟಿಎಫ್‌ಪಿ 2020, ದಿನಾಂಕ: 30.05.2020.

ಪ್ರತಿಯೊಂದು ಇಲಾಖೆಯಡಿಯಲ್ಲಿ ಬರುವ ಎಲ್ಲಾ ಯೋಜನೆಗಳನ್ನು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ.

i. ಇಲಾಖೆಗಳಿಗೆ ಪ್ರತ್ಯಾಯೋಜಿಸಲ್ಪಟ್ಟ ಯೋಜನೆಗಳು:

ಆಡಳಿತ ಇಲಾಖೆಗಳೊಂದಿಗೆ ಚರ್ಚಿಸಿದಂತೆ ಇಲಾಖೆಗಳಿಗೆ ಪ್ರತ್ಯಾಯೋಜಿಸಿರುವ ಯೋಜನೆಗಳ ಆಯವ್ಯಯ ಅಂದಾಜುಗಳನ್ನು ಕೆಳಮುಖವಾಗಿ ಪರಿಷ್ಕರಿಸಲಾಗಿದೆ. ಆಡಳಿತ ಇಲಾಖೆಗಳು ಈ ಕೆಳಗೆ ತಿಳಿಸಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು ಆರ್ಥಿಕ ಇಲಾಖೆಯಿಂದ ಅನಧಿಕೃತ ಟಿಪ್ಪಣಿ ಮೂಲಕ ತಿಳಿಸಲಾಗುವ ಪರಿಷ್ಕೃತ ಆಯವ್ಯಯ ಅಂದಾಜಿಗೆ ಮಿತಿಗೊಳಿಸಿ ಹಣ ಬಿಡುಗಡೆ ಮಾಡಲು ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ. ಅನಧಿಕೃತ ಟಿಪ್ಪಣಿಯಲ್ಲಿ ಕೆಲವು ಯೋಜನೆಗಳಿಗೆ ಸಂಬಂಧಪಟ್ಟಂತೆ ವಿಶೇಷ ಸೂಚನೆಗಳನ್ನು ನೀಡಲಾಗುವುದು. ಇದನ್ನು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಆಡಳಿತ ಇಲಾಖೆಗಳು ಖಚಿತಪಡಿಸಿಕೊಳ್ಳಲು ತಿಳಿಸಿದೆ.

ii) ಇಲಾಖೆಗಳಿಗೆ ಪ್ರತ್ಯಾಯೋಜನೆ ಮಾಡಿರದ ಯೋಜನೆಗಳು:

ಆಡಳಿತ ಇಲಾಖೆಗಳಿಗೆ ಪ್ರತ್ಯಾಯೋಜನೆ ಮಾಡಿರದ ಯೋಜನೆಗಳನ್ನು ಅನುಬಂಧ-Iರಲ್ಲಿ ತಿಳಿಸಿದೆ. ಇವುಗಳಿಗೆ ಸಂಬಂಧಿಸಿದಂತೆ ಹಣ ಬಿಡುಗಡೆ ಮಾಡಲು ಸೂಕ್ತ ಸಮರ್ಥನೆಯೊಂದಿಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗುತ್ತದೆ. ಈ ಯೋಜನೆಗಳು ನಿಗಮ/ಮಂಡಳಿಗಳ ಮೂಲಕ ಅನುಷ್ಠಾನವಾಗುತ್ತಿದ್ದಲ್ಲಿ, ನಿಗಮ/ಮಂಡಳಿಗಳ ಬ್ಯಾಂಕ್ ಖಾತೆಯಲ್ಲಿರುವ ಮೊತ್ತದ ವಿವರಗಳನ್ನು ಪ್ರಸ್ತಾವನೆಯೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕಾಗುತ್ತದೆ.

ಭಾಗ-I ಆಡಳಿತಾತ್ಮಕ ಅನುಮೋದನೆ:

1. ಒಂದು ಆರ್ಥಿಕ ವರ್ಷದಲ್ಲಿ ಮುಂದುವರಿದ ಅನುಮೋದನೆಗೊಂಡಿರುವ ಯೋಜನೆಗಳಿಗೆ ಮಾತ್ರ ಹಣವನ್ನು ಆಡಳಿತ ಇಲಾಖೆಗಳು ಬಿಡುಗಡೆಗೊಳಿಸಬಹುದಾಗಿದೆ. ಮೇಲೆ (2) ರಲ್ಲಿ ಉಲ್ಲೇಖಿಸಲಾದ ಆದೇಶದಲ್ಲಿ ಹೊಸ ಅಂಶಗಳ ಸೇರ್ಪಡೆ ಅಥವಾ ಬದಲಾವಣೆ ಸೇರಿದಂತೆ ಮುಂದುವರೆದ ಯೋಜನೆಗಳ ಮತ್ತು ಹೊಸ ಯೋಜನೆಗಳ ಅನುಮೋದನೆಗೆ ಮತ್ತು ಉಸ್ತುವಾರಿಗೆ ವಿವರವಾದ ಮಾರ್ಗ ಸೂಚಿಗಳೊಂದಿಗೆ ಕಾರ್ಯವಿಧಾನಗಳನ್ನು ಯೋಜನಾ

ಇಲಾಖೆಯು ತಿಳಿಸಿದೆ. 2020-21ನೇ ಸಾಲಿನಲ್ಲಿ ಯೋಜನಾ ಇಲಾಖೆಯು ಈ ಬಗ್ಗೆ ಮಾರ್ಗದರ್ಶನ/ಸೂಚನೆಗಳನ್ನು ನೀಡಿದಲ್ಲಿ ಅದನ್ನೂ ಸಹ ಓದಿಕೊಳ್ಳಲು ತಿಳಿಸಿದೆ.

2. ಆಡಳಿತಾತ್ಮಕ ಅನುಮೋದನೆಯ ಆದೇಶವನ್ನು ಹಣ ಬಿಡುಗಡೆಯ ಆದೇಶವೆಂದು ಪರಿಭಾವಿಸತಕ್ಕದ್ದಲ್ಲ. ಅನುಮೋದನೆಯಾಗಿರುವ ವಿವಿಧ ಯೋಜನೆಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ವಯ ಹಣ ಬಿಡುಗಡೆ ಮಾಡುವ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಬೇಕಾಗುತ್ತದೆ.

3. ಕಾಮಗಾರಿ ಅಂದಾಜುಗಳ ಅನುಮೋದನೆಗೆ ರೂ.10.00 ಕೋಟಿಗಳವರೆಗೆ ಮತ್ತು ಸರಕು ಹಾಗೂ ಸೇವೆಗಳ ಸಂಗ್ರಹಣೆಗೆ ರೂ.10.00 ಕೋಟಿಗಳವರೆಗೆ ಆರ್ಥಿಕ ಇಲಾಖೆಯ ಅನುಮೋದನೆ ಇದೆಯೆಂದು ಭಾವಿಸಿ ಆಡಳಿತಾತ್ಮಕ ಅನುಮೋದನೆಯನ್ನು (ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸುವ ಷರತಿಗೊಳಪಟ್ಟು) ನೀಡಬಹುದಾಗಿದೆ.

ಭಾಗ-II ಹಣ ಬಿಡುಗಡೆಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯಿಂದ ನಿರ್ದಿಷ್ಟವಾಗಿ ಅನುಮೋದನೆ ಪಡೆಯಬೇಕಾಗಿರುವ ಪ್ರಕರಣಗಳು:

4. ಈ ಆದೇಶದ **ಅನುಬಂಧ**-Iರಲ್ಲಿ ವರ್ಗೀಕರಿಸಲಾಗಿರುವ ಯೋಜನೆಗಳಿಗೆ ವರ್ಷದ ಯಾವುದೇ ಅವಧಿಯಲ್ಲಾಗಲೀ ಅಥವಾ ಎಷ್ಟೇ ಮೊತ್ತವನ್ನಾಗಲೀ, ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

5. ಮುಂದಿನ ಪೂರಕ ಅಂದಾಜುಗಳಲ್ಲಿ ರೂ.10.00 ಕೋಟಿ ಮತ್ತು ಅದಕ್ಕೂ ಹೆಚ್ಚಿನ ಅನುದಾನ ಒದಗಿಸಿದ್ದಲ್ಲಿ, ಅಂತಹವುಗಳಿಗೆ ಆರ್ಥಿಕ ಇಲಾಖೆಯ ಅನುಮೋದನೆ ಕಡ್ಡಾಯವಾಗಿರುವುದರಿಂದ ಈ ಆದೇಶದ ಭಾಗ IV ಅನ್ವಯವಾಗುವುದಿಲ್ಲ.

ಷೇರು ಬಂಡವಾಳ ಹೂಡಿಕೆ ಮತ್ತು ಸಾಲಗಳು:

6. ಕರ್ನಾಟಕ ಸರ್ಕಾರದ (ವ್ಯವಹಾರಗಳ ನಿರ್ವಹಣೆ) ನಿಯಮಗಳು, 1977ರಲ್ಲಿ ವಿಧಿಸಿರುವ ನಿಯಮಗಳನ್ನು ಮತ್ತು ಆರ್ಥಿಕ ಇಲಾಖೆಯು ಹೊರಡಿಸಿರುವ ಸರ್ಕಾರದ ಆದೇಶ ಸಂ:ಎಫ್‌ಡಿ: 1 ಬಿಎಲ್ಎ 2013, ದಿ:26.11.2013 ಆದೇಶದಲ್ಲಿನ ಸೂಚನೆಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಹಾಗೂ ಆಡಳಿತ ಇಲಾಖೆಗಳು ಇದುವರೆಗೆ ಬಿಡುಗಡೆಯಾಗಿರುವ ಷೇರು ಬಂಡವಾಳವು ಅಧಿಕೃತ ಷೇರು ಬಂಡವಾಳದ ಮಿತಿಯನ್ನು ಮೀರದಿರುವುದನ್ನು ಹಾಗೂ ಷೇರು ಬಂಡವಾಳದ ರಾಜ್ಯದ ಪಾಲು ಷೇರುದಾರರ ಒಪ್ಪಂದದ ಪ್ರಕಾರ ಇರುವುದನ್ನು ಖಚಿತಪಡಿಸಿಕೊಳ್ಳುವ ಷರತ್ತಿಗೊಳಪಟ್ಟು ರೂ.10.00 ಕೋಟಿಯೊಳಗಿನ ಆಯವ್ಯಯ ಅನುದಾನ ಲಭ್ಯವಿದ್ದಲ್ಲಿ, ಆಯವ್ಯಯ ಅವಕಾಶದವರೆಗೆ, ಆರ್ಥಿಕ ಇಲಾಖೆಯ ಅನುಮೋದನೆ ಇದೆಯೆಂದು ಭಾವಿಸಿ ಆಡಳಿತ ಇಲಾಖೆಗಳು ಷೇರು ಬಂಡವಾಳವನ್ನು ಒಂದು ಆರ್ಥಿಕ ವರ್ಷದಲ್ಲಿ ಬಿಡುಗಡೆ ಮಾಡಬಹುದಾಗಿದೆ. ರೈಲ್ವೆ ಯೋಜನೆಗಳಿಗೆ ರಾಜ್ಯ ಸರ್ಕಾರದ ಷೇರು ಬಂಡವಾಳವನ್ನು ಆಯವ್ಯಯ ಅಂದಾಜುಗಳ ಶೇ.50 ರವರೆಗೆ ಆರ್ಥಿಕ ಇಲಾಖೆಯ ಅನುಮೋದನೆ ಇದೆ ಎಂದು ಭಾವಿಸಿ ಬಿಡುಗಡೆ ಮಾಡಬಹುದಾಗಿದೆ. ಒಂದು ವರ್ಷದಲ್ಲಿ ರೂ.10.00 ಕೋಟಿಗಿಂತ ಹೆಚ್ಚಿನ

ಷೇರು ಬಂಡವಾಳವನ್ನು ಹಾಗೂ ಎಷ್ಟೇ ಮೊತ್ತದ ಸಾಲವನ್ನಾಗಲೀ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಪೂರ್ವಾನುಮೋದನೆ ಪಡೆಯಬೇಕಾಗುತ್ತದೆ.

ಭಾಗ-III ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ ಆಡಳಿತ ಇಲಾಖೆಗಳು ಹಣ ಬಿಡುಗಡೆ ಮಾಡಬಹುದಾದ ಪ್ರಕರಣಗಳು:

ವೇತನ ಮತ್ತು ಪಿಂಚಣಿ ಮುಂತಾದವುಗಳು:

7. ಆರ್ಥಿಕ ಇಲಾಖೆಯ ಸಹಮತಿಯಿದೆಯೆಂದು ಭಾವಿಸಿ ಅನುಬಂಧ-2ರಲ್ಲಿರುವ ಬಾಬ್ತುಗಳಲ್ಲಿ ವೇತನಕ್ಕೆ ಸಂಬಂಧಿಸಿದಂತೆ ಏಪ್ರಿಲ್, ಮೇ ತಿಂಗಳಿಗೆ ಬಿಡುಗಡೆ ಮಾಡಿರುವುದೂ ಸೇರಿದಂತೆ ಆಯವ್ಯಯದ 8/12 ಭಾಗದಷ್ಟು ಮೊತ್ತವನ್ನು ಮಾತ್ರ ಬಿಡುಗಡೆ ಮಾಡಬಹುದಾಗಿದೆ. ಇದರಲ್ಲಿ ಈಗಾಗಲೇ ಬಿಡುಗಡೆ ಮಾಡಲಾಗಿರುವ ಮೊತ್ತವನ್ನು ಹೊರತುಪಡಿಸಿ ಉಳಿದಿರುವ ಮೊತ್ತವನ್ನು, ಜೂನ್‌ನಿಂದ ನವೆಂಬರ್ 2020ರವರೆಗೆ ವೇತನ ಸೆಳೆಯಲು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಬಹುದಾಗಿದೆ. ಈ ಸೂಚನೆ ಹೆಚ್.ಆರ್.ಎಂ.ಎಸ್. ನಿಂದ ಹೊರಗೆ ವೇತನ ಸೆಳೆಯುವ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ. ಹೆಚ್‌ಆರ್‌ಎಂಎಸ್ ನಿಂದ ಹೊರಗೆ ವೇತನ ಸೆಳೆಯುತ್ತಿರುವ ಸಹಾಯಾನುದಾನ ಸಂಸ್ಥೆಗಳಿಗೆ ಸಂಬಂಧಿಸಿದಂತೆ ತುಟ್ಟಿಭತ್ಯೆಯನ್ನು ಪ್ರಸ್ತುತವಿರುವ ಹಂತಕ್ಕೆ ಪರಿಷ್ಕರಿಸಿ ನಿಗದಿಗೊಳಿಸಲಾಗಿದೆ. ಅನುಬಂಧ-3ರಲ್ಲಿ ತಿಳಿಸಲಾಗಿರುವ ಪರಿಷ್ಕೃತ ಆಯವ್ಯಯ ಅಂದಾಜುಗಳಂತೆ ಈ ಸಹಾಯಾನುದಾನ ಸಂಸ್ಥೆಗಳಿಗೆ ನವೆಂಬರ್ 2020ರ ವರೆಗೆ ಪ್ರತಿ ತಿಂಗಳು 1/12ನೇ ಭಾಗವನ್ನು ಬಿಡುಗಡೆ ಮಾಡಬಹುದಾಗಿದೆ. ಸಾಮಾಜಿಕ ಭದ್ರತಾ ಪಿಂಚಣಿಯೂ ಸೇರಿದಂತೆ ಯಾವುದೇ ಬಾಬ್ತುಗಳಿಗೆ ಆಯವ್ಯಯ ಅವಕಾಶಕ್ಕಿಂತ ಹೆಚ್ಚಿನ ಹಣ ಬಿಡುಗಡೆ ಮಾಡಬೇಕಾದಲ್ಲಿ ಆರ್ಥಿಕ ಇಲಾಖೆಯ ಪೂರ್ವಾನುಮತಿ ಪಡೆಯತಕ್ಕದ್ದು. ಅನುಬಂಧ-2 ರಲ್ಲಿ ಪಟ್ಟಿ ಮಾಡಲಾದ ಬಾಬ್ತುಗಳಿಗೆ ಸಂಬಂಧಿಸಿದಂತೆ, ಆಯವ್ಯಯ ಅವಕಾಶದವರೆಗೆ ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಹಣವನ್ನು ಬಿಡುಗಡೆ ಮಾಡಬಹುದಾಗಿದೆ. ಈ ಯೋಜನೆಗಳ ಕೆಲವು ನಿರ್ದಿಷ್ಟ ಬಾಬ್ತುಗಳಡಿ, ಸಾಮಾಜಿಕ ಭದ್ರತಾ ಪಿಂಚಣಿ ಪಾವತಿಗಳೂ ಸೇರಿದಂತೆ, ಆಯವ್ಯಯ ಅವಕಾಶಕ್ಕಿಂತ ಹೆಚ್ಚುವರಿಯಾಗಿ ಹಣ ಬಿಡುಗಡೆ ಮಾಡಬೇಕಾದ ಸಂದರ್ಭದಲ್ಲಿ ಕೇವಲ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಮಾತ್ರ ಮಾಡಬಹುದಾಗಿದೆ.

ರೂ.10.00ಕೋಟಿಗಳಿಗಿಂತ ಕಡಿಮೆ ಆಯವ್ಯಯ ಅವಕಾಶವಿರುವ ರಾಜ್ಯ ಯೋಜನೆಗಳು:

8. ರೂ.10.00 ಕೋಟಿಗಳವರೆಗೆ ಆಯವ್ಯಯ ಅವಕಾಶವಿರುವ ರಾಜ್ಯ ಯೋಜನೆಗಳಿಗೆ ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ ಆಯವ್ಯಯದಲ್ಲಿ ಪರಿಷ್ಕೃತಗೊಳಿಸಿರುವ ಮೊತ್ತವನ್ನು ಕನಿಷ್ಠ 2 ಕಂತುಗಳಲ್ಲಿ ಈ 6 ತಿಂಗಳ ಅವಧಿಯಲ್ಲಿ ಆಡಳಿತ ಇಲಾಖೆಯು ಬಿಡುಗಡೆಗೊಳಿಸಬಹುದು. ಮೊದಲನೆಯ ಕಂತನ್ನು ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಶೇ 25 ರವರೆಗೆ ಬಿಡುಗಡೆ ಮಾಡಬಹುದಾಗಿದೆ. ಬಾಕಿ ಶೇ 25 ರಷ್ಟನ್ನು ಪ್ರಾರಂಭಿಕ ಶಿಲ್ಕಿನ ಮೊತ್ತವೂ ಸೇರಿದಂತೆ ಈ ಯೋಜನೆಗಾಗಿ ಬಿಡುಗಡೆಗೊಳಿಸಿದ ಒಟ್ಟು ಹಣದಲ್ಲಿ ಶೇ. 75 ರಷ್ಟನ್ನು ಉಪಯೋಗಿಸಿಕೊಂಡ ನಂತರ ಬಿಡುಗಡೆ ಮಾಡುವುದು.

9. ಮುಂಬರುವ ಪೂರಕ ಅಂದಾಜುಗಳ ಮೂಲಕ ಅನುಮೋದಿಸಲಾದ ಎಲ್ಲಾ ರೂ.10.00 ಕೋಟಿಗಳಿಗಿಂತ ಕಡಿಮೆ ಇರುವ ಅನುದಾನಗಳನ್ನು ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಆಡಳಿತ ಇಲಾಖೆಗಳು ಬಿಡುಗಡೆ ಮಾಡಬಹುದಾಗಿದೆ.

ಭಾಗ-IV ರೂ.10.00 ಕೋಟಿ ಮತ್ತು ಮೇಲ್ಪಟ್ಟು ಆಯವ್ಯಯ ಅವಕಾಶವಿರುವ ರಾಜ್ಯ ಯೋಜನೆಗಳು: ಆರು ತಿಂಗಳ ಅವಧಿಯಲ್ಲಿ ಮಾಡಬೇಕಾದ ಮಾಸಿಕ ಬಿಡುಗಡೆ:

10. ಈ ಆದೇಶದಲ್ಲಿ ಇತರೆ ಯೋಜನೆಗಳ ಬಗ್ಗೆ ಯಾವುದೇ ವಿಧಾನಗಳನ್ನು ತಿಳಿಸಿದ್ದರೂ ಸಹ ಈ ಕೆಳಗೆ ಸೂಚಿಸಲಾದ ಯೋಜನೆಗಳಿಗೆ ಮಾಡಲಾದ ಆಯವ್ಯಯ ಅವಕಾಶದ ಹನ್ನೆರಡನೇ ಒಂದು ಭಾಗದಷ್ಟು (1/12) ಮೊತ್ತವನ್ನು ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಪ್ರತಿ ತಿಂಗಳು ಆರ್ಥಿಕ ವರ್ಷದ 6 ತಿಂಗಳವರೆಗೆ ಆಡಳಿತ ಇಲಾಖೆಗಳು ಬಿಡುಗಡೆ ಮಾಡಬಹುದಾಗಿದೆ.

(ಎ) **ಅನುಬಂಧ-1ರಲ್ಲಿನ ಯೋಜನೆಗಳನ್ನು ಹೊರತುಪಡಿಸಿ ಲೋಕೋಪಯೋಗಿ ಇಲಾಖೆಯ ಎಲ್ಲಾ ಯೋಜನೆಗಳು.**

(ಬಿ) **ಅನುಬಂಧ-1ರಲ್ಲಿನ ಯೋಜನೆಗಳನ್ನು ಹೊರತುಪಡಿಸಿ ಭಾರಿ, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಯೋಜನೆಗಳು:** ಆದರೆ, ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಅನುಮೋದಿಸಲಾದ ಯೋಜನೆ ಪ್ರಕಾರ ಹೆಚ್ಚುವರಿ ಆಯವ್ಯಯ ಸಂಪನ್ಮೂಲ (ಇಬಿಆರ್)ಗಳನ್ನು ಸಂಗ್ರಹಿಸುವುದಕ್ಕೆ ಒಳಪಟ್ಟು ಭಾರಿ, ಮಧ್ಯಮ ಮತ್ತು ಸಣ್ಣ ನೀರಾವರಿಯ ಎಲ್ಲಾ ಯೋಜನೆಗಳು.

ಮೇಲೆ (ಎ) ಮತ್ತು (ಬಿ) ರಲ್ಲಿರುವ ಎಸ್‌ಸಿಎಸ್‌ಪಿ-ಟಿಎಸ್‌ಪಿ ಯೋಜನೆಗಳಿಗೆ ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನಗಳ (ಹಿಂದಿನ ತಿಂಗಳುಗಳಲ್ಲಿ ಬಿಡುಗಡೆಯಾಗದೇ ಉಳಿದಿರುವ ಅನುದಾನಗಳೂ ಸೇರಿದಂತೆ) ಹನ್ನೆರಡನೇ ಒಂದು ಭಾಗವನ್ನು ಪ್ರತಿ ತಿಂಗಳೂ ಬಿಡುಗಡೆ ಮಾಡಬಹುದಾಗಿದೆ.

(ಸಿ) **ಆಹಾರ ಸಹಾಯಧನ-** ಅನ್ನಭಾಗ್ಯ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ಹಾಗೂ ಮೇಲಿರುವ ಫಲಾನುಭವಿಗಳಿಗೆ ಆಹಾರಧಾನ್ಯಗಳಿಗೆ ಸಹಾಯಧನ, ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳಿಗೆ ಇತರೆ ಸಹಾಯಧನಕ್ಕೆ ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಗೆ ಅನ್ವಯವಾಗುತ್ತದೆ.

11. ಐ.ಪಿ. ಸೆಟ್ಟುಗಳು, ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಇವುಗಳಿಗೆ ಬಿಡುಗಡೆ ಮಾಡಬೇಕಾದ ಸಬ್ಸಿಡಿ ಹಣದ ಮಾಸಿಕ ಮಿತಿಯನ್ನು ಆರ್ಥಿಕ ಇಲಾಖೆಯಿಂದ ಇಂಧನ ಇಲಾಖೆಗೆ ಕಡತದಲ್ಲಿ ತಿಳಿಸಲಾಗುವುದು.

[illegible]:

12. [illegible] II-[illegible] [illegible] 10.00 [illegible]

13. [illegible]

[illegible]:

14. [illegible]

[illegible]:

[illegible]:

15. [illegible] 2020 [illegible] 2020 [illegible]

[illegible]

16. [illegible]

17.ಜಿಲ್ಲಾ ಪಂಚಾಯತ್ ಲಿಂಕ್ ಪುಸ್ತಕದಲ್ಲಿ ಕೆಲವು ಯೋಜನೆಗಳಿಗೆ ಒಟ್ಟಾರೆಯಾಗಿ ಉದ್ದೇಶಿತ ಲೆಕ್ಕ ಶೀರ್ಷಿಕೆ 300 ರಡಿಯಲ್ಲಿ ಆಯವ್ಯಯ ಅವಕಾಶ ಮಾಡಲಾಗಿದೆ. ಆದರೆ, **ಅನುಬಂಧ-1** ರಲ್ಲಿ ಪಟ್ಟಿ ಮಾಡಲಾದ ಯೋಜನೆಗಳಿಗೆ **ಆರ್ಥಿಕ ಇಲಾಖೆಯ ಅನುಮೋದನೆ ಪಡೆದೇ** ಮಾಡತಕ್ಕದ್ದು. ಉದ್ದೇಶಿತ ಲೆ.ಶೀ.300 ರಡಿ ಒದಗಿಸಿದ ಇತರೆ ಯೋಜನೆಗಳಿಗೆ ಆಡಳಿತ ಇಲಾಖೆಯೇ ಬಿಡುಗಡೆ ಮಾಡಬಹುದಾಗಿದೆ. ಈ ಒಟ್ಟಾರೆ ಅವಕಾಶಗಳು ಕೇಂದ್ರ ಪುರಸ್ಕೃತ ಯೋಜನೆ ಅಥವಾ ರಾಜ್ಯ ಯೋಜನೆಗಳಿಗೆ ಸಂಬಂಧಿಸಿರುತ್ತದೆ. ಇತರ ಯೋಜನೆಗಳಿಗೆ ಸಂಬಂಧಿಸಿದಂತೆ ಕಂಡಿಕೆ 12-13 ರಲ್ಲಿ ತಿಳಿಸಿರುವ ವಿಧಾನಗಳನ್ನನುಸರಿಸಿ ಬಿಡುಗಡೆ ಮಾಡಬೇಕಾಗುತ್ತದೆ. ಆದರೆ, ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕಂಡಿಕೆ 23 ರಿಂದ 26 ರವರೆಗೆ ತಿಳಿಸಿರುವ ವಿಧಾನಗಳು ಅನ್ವಯವಾಗುತ್ತವೆ.

ಪ.ಜಾ.ಉ.ಯೋ ಮತ್ತು ಗಿ.ಉ.ಯೋ ಇವುಗಳಿಗೆ ಸಂಬಂಧಿಸಿದಂತೆ ಹಣ ಬಿಡುಗಡೆ:

18.ಜಿಲ್ಲಾ ವಲಯ ಯೋಜನೆಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಆಡಳಿತ ಇಲಾಖೆಗಳು ಆಯಾ ಯೋಜನೆಗಳಡಿ ಮಾಡುವ ಬಿಡುಗಡೆಗೆ ಅನುಗುಣವಾಗಿ SCSP ಹಾಗೂ TSPಗೆ ಸಂಬಂಧಪಟ್ಟಂತೆ ಸಹಾ ಬಿಡುಗಡೆಯನ್ನು ಮಾಡಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವುದು.

ನಗರ ಸ್ಥಳೀಯ ಸಂಸ್ಥೆಗಳಿಗೆ ಹಣ ಬಿಡುಗಡೆ:

19. ಅನುಬಂಧ-1 ರಲ್ಲಿನ ಯೋಜನೆಗಳನ್ನು ಹೊರತುಪಡಿಸಿ ಇತರೆ ಯೋಜನೆಗಳಿಗೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳ ಅನುದಾನಗಳನ್ನು ಆರ್ಥಿಕ ಇಲಾಖೆಯ ಸಹಮತಿ ಇದೆ ಎಂದು ಭಾವಿಸಿ ಆಯವ್ಯಯ ಅವಕಾಶದ ಶೇ.50ರವರೆಗೆ ಶೇ.25 ರಂತೆ ಎರಡು ಕಂತಿನಲ್ಲಿ ಆರ್ಥಿಕ ವರ್ಷದ ನವೆಂಬರ್‌ವರೆಗೆ ಬಿಡುಗಡೆ ಮಾಡಬಹುದಾಗಿದೆ.

20. ರಾಜ್ಯ ಯೋಜನೆಗಳಿಗೆ ಸಂಬಂಧಿಸಿದಂತೆ ಈ ಆದೇಶದ ಕಂಡಿಕೆ 12-13 ರಲ್ಲಿ ತಿಳಿಸಿರುವ ಅಧಿಕಾರ ಹಾಗೂ ವಿಧಾನಗಳು ಅನ್ವಯಿಸುತ್ತದೆ ಹಾಗೂ ಕೇಂದ್ರ ಯೋಜನೆಗಳಿಗೆ ಸಂಬಂಧಿಸಿದಂತೆ ಕಂಡಿಕೆ-23 ರಿಂದ 27 ರವರೆಗಿನ ವಿಧಾನಗಳು ಹಾಗೂ ಸಾಲ ಸೇವೆಗಳಿಗೆ ಸಂಬಂಧಿಸಿದಂತೆ ಕಂಡಿಕೆ-14ರಲ್ಲಿನ ವಿಧಾನಗಳು ಅನ್ವಯಿಸುತ್ತದೆ.

ಪ.ಜಾ.ಉ.ಯೋ ಮತ್ತು ಗಿ.ಉ.ಯೋ ಇವುಗಳಿಗೆ ಸಂಬಂಧಿಸಿದಂತೆ ಹಣ ಬಿಡುಗಡೆ:

21. ಪ.ಜಾ.ಉ.ಯೋ ಮತ್ತು ಗಿ.ಉ.ಯೋ ಇವುಗಳಡಿ ನಗರ ಸ್ಥಳೀಯ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡುವಾಗ (ಅನುಬಂಧ-1ರಲ್ಲಿ ತೋರಿಸಿರುವ ಯೋಜನೆಗಳನ್ನು ಹೊರತುಪಡಿಸಿ) ನಗರಾಭಿವೃದ್ಧಿ ಇಲಾಖೆಯು ಲಿಂಕ್ ಡಾಕ್ಯುಮೆಂಟ್‌ನಲ್ಲಿ ತೋರಿಸಿರುವ ಹಂಚಿಕೆಗಳನ್ನು ಬಿಡುಗಡೆ ಆದೇಶಗಳಲ್ಲಿ ಸೇರಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

ವೆಚ್ಚ ಹಿಂಬರಿಸಬಹುದಾದ ಯೋಜನೆಗಳು – ಬಾಹ್ಯ ನೆರವಿನ ಯೋಜನೆಗಳು/ಆರ್.ಐ.ಡಿ.ಎಫ್/ಎ.ಐ.ಬಿ.ಪಿ

22. ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ ಆಯವ್ಯಯ ಅವಕಾಶದ ಶೇ.25ರಷ್ಟನ್ನು ಎರಡು ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಬಹುದಾಗಿದೆ. ಈ ರೀತಿ ಬಿಡುಗಡೆ ಮಾಡುವಾಗ ಪ್ರಾರಂಭಿಕ ಶಿಲ್ಕು ಸೇರಿದಂತೆ ಹಿಂದಿನ ಬಿಡುಗಡೆಗಳ ಕನಿಷ್ಠ ಶೇ.75 ರಷ್ಟು ವೆಚ್ಚವಾಗಿರುವುದನ್ನು ಹಾಗೂ ವೆಚ್ಚ ಹಾಗೂ ಅದಕ್ಕೆ ಸಂಬಂಧಿಸಿದಂತೆ ಮರುಪಾವತಿ ಕೋರಿ ಭಾರತ ಸರ್ಕಾರಕ್ಕೆ ಸಲ್ಲಿಸುವ ಕ್ಲೇಮಿನ ಅಂತರ ಒಂದು ತಿಂಗಳಿಗಿಂತ ಹೆಚ್ಚಾಗಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಕೇಂದ್ರ ಪುರಸ್ಕೃತ ಯೋಜನೆಗಳು:

23. ಭಾರತ ಸರ್ಕಾರವು ಪ್ರಸ್ತುತವಿರುವ ವಿತ್ತೀಯ ನಿರ್ಬಂಧನೆಗಳ ಹಿನ್ನೆಲೆಯಲ್ಲಿ ಕೆಲವು ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಆಯವ್ಯಯ ಅಂದಾಜುಗಳನ್ನು ಕಡಿತಗೊಳಿಸುವುದಾಗಿ ತಿಳಿದು ಬಂದಿರುತ್ತದೆ. ಆದ್ದರಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಈ ಯೋಜನೆಗಳಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಮಾಡಲಾಗುವ ಬಿಡುಗಡೆಗಳ ಬಗ್ಗೆ ಭಾರತ ಸರ್ಕಾರದಿಂದ ಸಂಬಂಧಪಟ್ಟ ಸಚಿವಾಲಯಗಳನ್ನು ಸಂಪರ್ಕಿಸಿ ಕೇಂದ್ರದಿಂದ ಬಿಡುಗಡೆಯಾಗುವ ಅನುದಾನಕ್ಕೆ ರಾಜ್ಯದ ಪಾಲು ಸೇರಿಸಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಂತೆ ಆಡಳಿತ ಇಲಾಖೆಗಳನ್ನು ಕೋರಲಾಗಿದೆ.

24. **ಅನುಬಂಧ–1** ರಲ್ಲಿನ ಯೋಜನೆಗಳಿಗೆ ಹಣ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಸಹಮತಿಯನ್ನು ಅಗತ್ಯವಾಗಿ ಪಡೆಯತಕ್ಕದ್ದು.

25. ಈ ತರಹದ ಯೋಜನೆಗಳಲ್ಲಿ, ಕೇಂದ್ರ ಮತ್ತು ರಾಜ್ಯದ ಪಾಲನ್ನು ಅಂಗೀಕೃತ ಮಾದರಿ ಹಂಚಿಕೆ ಅನ್ವಯ, ಕೇಂದ್ರದ ಪಾಲು ಸ್ವೀಕೃತವಾಗಿರುವ ಬಗ್ಗೆ ಆರ್ಥಿಕ ಇಲಾಖೆಯಿಂದ ತಿಳಿಸಲಾಗುವ ಜಮಾ ದೃಢೀಕರಣ ಪತ್ರದ ಪ್ರಕಾರ ಆಯವ್ಯಯ ಲಭ್ಯತೆಗೊಳಪಟ್ಟು ಬಿಡುಗಡೆ ಮಾಡಬಹುದು. **ಆದರೆ, ಕೆಲವು ಆಡಳಿತ ಇಲಾಖೆಗಳು ಕೇಂದ್ರದಿಂದ ಬಿಡುಗಡೆಯನ್ನು ನಿರೀಕ್ಷಿಸಿ ತಮ್ಮ ಹಂತದಲ್ಲಿಯೇ ಕೇಂದ್ರ ಮತ್ತು ರಾಜ್ಯದ ಪಾಲಿನ ಬಿಡುಗಡೆ ಮಾಡುತ್ತಿರುವುದು ಆರ್ಥಿಕ ಇಲಾಖೆಯ ಗಮನಕ್ಕೆ ಬಂದಿದ್ದು, ಈ ಪದ್ಧತಿಯನ್ನು ಕಡ್ಡಾಯವಾಗಿ ನಿರ್ಬಂಧಿಸುವುದು. ತದ ನಂತರದಲ್ಲಿ ಇಂತಹ ಯಾವುದೇ ಪ್ರಕರಣಗಳು ಆರ್ಥಿಕ ಇಲಾಖೆಯ ಗಮನಕ್ಕೆ ಬಂದಲ್ಲಿ ಆ ಯೋಜನೆಯಡಿ ಮುಂದಿನ ಬಿಡುಗಡೆಗಳನ್ನು ನಿಲ್ಲಿಸಲಾಗುವುದು ಮತ್ತು ಈ ಸಂಬಂಧ ನೀಡಿರುವ ಆರ್ಥಿಕ ಅಧಿಕಾರವನ್ನು ಹಿಂಪಡೆಯಲಾಗುವುದು.** ಬಿಡುಗಡೆ ಸಂಬಂಧ ಹೊರಡಿಸುವ ಸರ್ಕಾರಿ ಆದೇಶವು ಮಾದರಿ ಹಂಚಿಕೆಯ ವಿವರಗಳು, ಹಿಂದಿನ ಕೇಂದ್ರ ಮತ್ತು ರಾಜ್ಯ ಪಾಲಿನ ಬಿಡುಗಡೆಗಳು, ರಾಜ್ಯ ಸರ್ಕಾರಕ್ಕೆ ಜಮೆಯಾದ ಕೇಂದ್ರದ ಸ್ವೀಕೃತಿಗಳು ಮತ್ತು ಇದಕ್ಕನುಗುಣವಾಗಿ ಬಿಡುಗಡೆಗೊಳಿಸಲು ಉದ್ದೇಶಿಸಿರುವ ರಾಜ್ಯದ ಪಾಲು – ಈ ವಿವರಗಳನ್ನು ಒಳಗೊಂಡಿರಬೇಕು.

26. ಭಾರತ ಸರ್ಕಾರದಿಂದ ಕೇಂದ್ರದ ಪಾಲಿನ ಹಣ ಬಿಡುಗಡೆಯಾಗಿದ್ದು ರಾಜ್ಯ ಸರ್ಕಾರದ ಲೆಕ್ಕಕ್ಕೆ ಜಮೆಯಾಗುವ ಮುನ್ನ ಕೇಂದ್ರ ಮತ್ತು ರಾಜ್ಯದ ಪಾಲಿನ ಹಣವನ್ನು ಬಿಡುಗಡೆ ಮಾಡಬೇಕಾದಲ್ಲಿ, ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಯ ವಿಶೇಷಾಧಿಕಾರಿ (ಎಫ್.ಆರ್.ಸಿ ಮತ್ತು ಸಿ.ಸಿ.) ಯವರಿಗೆ ಕಳುಹಿಸತಕ್ಕದ್ದು. ಭಾರತ ಸರ್ಕಾರದಿಂದ ಬಿಡುಗಡೆಗೊಂಡ ಹಣದ ಆದೇಶ ಮತ್ತು ಆಯವ್ಯಯ ಅನುದಾನದ ಲಭ್ಯತೆಯ ವಿವರಗಳನ್ನು ಪ್ರಸ್ತಾವನೆಗಳು ಒಳಗೊಂಡಿರಲೇಬೇಕು.

27. ಲಭ್ಯವಿರುವ ಆಯವ್ಯಯ ಅನುದಾನವು ಕೇಂದ್ರ ಮತ್ತು ರಾಜ್ಯದ ಪಾಲನ್ನು ಬಿಡುಗಡೆಗೊಳಿಸಲು ಸಾಕಾಗದಿದ್ದಲ್ಲಿ, ಮೇಲೆ (1) ರಲ್ಲಿ ಓದಲ್ಪಟ್ಟ ಸರ್ಕಾರಿ ಆದೇಶದಂತೆ ಪುನರ್ವಿನಿಯೋಗ ಅಥವಾ ಪೂರಕ ಅಂದಾಜುಗಳಲ್ಲಿ ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸಬೇಕು.

ಕೇಂದ್ರ ಹಣಕಾಸು ಆಯೋಗ ಅನುದಾನಗಳು

28. ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡುವ 15ನೇ ಆರ್ಥಿಕ ಆಯೋಗದ ಸಾಮಾನ್ಯ ಮೂಲಭೂತ ಅನುದಾನ ಮತ್ತು 14ನೇ ಆರ್ಥಿಕ ಆಯೋಗದ ಸಾಮಾನ್ಯ ಕಾರ್ಯಕ್ಷಮತೆ ಅನುದಾನಗಳಿಗೆ ಯಾವುದೇ ಕ್ರಿಯಾ ಯೋಜನೆಯ ಅನುಮೋದನೆ ಅಗತ್ಯವಿರುವುದಿಲ್ಲ ಮತ್ತು ಅನುದಾನ ಸ್ವೀಕೃತಿಯಾದ 15 ದಿನಗಳೊಳಗೆ ಈ ಮೊತ್ತವನ್ನು ಬಿಡುಗಡೆ ಮಾಡತಕ್ಕದ್ದು.

ಭಾಗ–V–ಸಾಮಾನ್ಯ ಸೂಚನೆಗಳು:

29. ಆಡಳಿತಾತ್ಮಕ ವೆಚ್ಚಗಳು, ಕಟ್ಟಡ ವೆಚ್ಚಗಳು ಮತ್ತು ಸಾರಿಗೆ ವೆಚ್ಚಗಳಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಕಛೇರಿ ನಡೆಸಲು ಅಗತ್ಯವಿರುವ ವೆಚ್ಚಗಳನ್ನು ಭರಿಸಲು ಮಾತ್ರ ಬಳಸುವುದು. ಉದ್ದೇಶಿತ ಲೆಕ್ಕ ಶೀರ್ಷಿಕೆ 051–ಸಾಮಾನ್ಯ ವೆಚ್ಚಗಳು, 050–ಕಛೇರಿ ವೆಚ್ಚಗಳು, 071–ಕಟ್ಟಡ ವೆಚ್ಚಗಳು, 195–ಸಾರಿಗೆ ವೆಚ್ಚಗಳು ಇವುಗಳಡಿ ಒದಗಿಸಿರುವ ಅನುದಾನವನ್ನು ಹೊಸ ವಾಹನ ಖರೀದಿ, ಪೀಠೋಪಕರಣ ಖರೀದಿ, ಕಟ್ಟಡಗಳ ಭಾರಿ ದುರಸ್ತಿ ಹಾಗೂ ನಿರ್ಮಾಣ ಮುಂತಾದವುಗಳಿಗೆ ಬಳಸದಿರಲು ಸೂಚಿಸಿದೆ.

30. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 6 ಬಿಪಿಇ 2019 ದಿನಾಂಕ:27.9.2019 ರಲ್ಲಿ ಎಲ್ಲಾ ವೇತನಾನುದಾನ ಸಂಸ್ಥೆಗಳು 1.4.2020 ರೊಳಗಾಗಿ ಹೆಚ್.ಆರ್.ಎಂ.ಎಸ್. ಮೂಲಕ ವೇತನ ಸೆಳೆಯಲು ತಿಳಿಸಲಾಗಿತ್ತು. ಆದರೆ ಕೆಲವು ಸಂಸ್ಥೆಗಳು ಇದುವರೆಗೂ ಹೆಚ್.ಆರ್.ಎಂ.ಎಸ್. ಗೆ ಬರದಿರುವುದನ್ನು ಗಮನಿಸಲಾಗಿದೆ. ಆದ್ದರಿಂದ 30.6.2020 ರೊಳಗಾಗಿ ಹೆಚ್.ಆರ್.ಎಂ.ಎಸ್ ಗೆ ಬರಲು ಕೊನೆಯ ಅವಕಾಶ ನೀಡಲಾಗಿದೆ. ಈ ಸಂಸ್ಥೆಗಳು ತಮ್ಮ ಜೂನ್ ತಿಂಗಳ ವೇತನವನ್ನು ಹೆಚ್.ಆರ್.ಎಂ.ಎಸ್. ನಲ್ಲಿಯೇ ಸೆಳೆಯತಕ್ಕದ್ದು. ಈ ಬಗ್ಗೆ ಏನಾದರೂ ಸಮಸ್ಯೆಯಿದ್ದಲ್ಲಿ ಸಂಸ್ಥೆಗಳು ತಮ್ಮ ಆಡಳಿತ ಇಲಾಖೆ ಹಾಗೂ ಆರ್ಥಿಕ ಇಲಾಖೆಯನ್ನು ಸಂಪರ್ಕಿಸುವುದು. ಹೆಚ್.ಆರ್.ಎಂ.ಎಸ್. ನಲ್ಲಿ ಬಂದಿರುವ ಸಂಸ್ಥೆಗಳು ಹೆಚ್.ಆರ್.ಎಂ.ಎಸ್. ನಲ್ಲಿಯೇ ವೇತನವನ್ನು ಸೆಳೆಯಲು ತಿಳಿಸಿದೆ.

ಮರುಪಾವತಿ ಕ್ಲೇಮುಗಳ ಮತ್ತು ಬಳಕೆ ಪ್ರಮಾಣಪತ್ರಗಳ ಸಲ್ಲಿಕೆ

31.ಭಾರತ ಸರ್ಕಾರಕ್ಕೆ, ಬಾಹ್ಯ ನಿಧಿ ಪೂರೈಕೆ ಏಜೆನ್ಸಿಗಳಾದ ವಿಶ್ವ ಬ್ಯಾಂಕ್, ಎ.ಡಿ.ಬಿ., ಜೆ.ಐ.ಸಿ.ಎ., ಮುಂತಾದವುಗಳಿಗೆ ಹಾಗೂ ಕಂಡಿಕೆ 22 ರಲ್ಲಿ ಉಲ್ಲೇಖಿಗೊಂಡ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ದೇಶೀಯ ಆರ್ಥಿಕ ಸಂಸ್ಥೆಗಳಾದಂತಹ ನಬಾರ್ಡ್ ಮುಂತಾದವುಗಳಿಗೆ ಮರುಪಾವತಿ ಕ್ಲೇಮುಗಳ ಮತ್ತು ಬಳಕೆ ಪ್ರಮಾಣಪತ್ರಗಳ ಸಲ್ಲಿಕೆಯಾಗಬೇಕಾದ ಯೋಜನೆಗಳಿಗೆ ಸಂಬಂಧಿಸಿದಂತೆ, ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು, ಈ ಯೋಜನೆಗಳ ನೈಜ ವೆಚ್ಚ ಮತ್ತು ಮರುಪಾವತಿ ಕ್ಲೇಮುಗಳ ಅಥವಾ ಬಳಕೆ ಪ್ರಮಾಣಪತ್ರಗಳ ಸಲ್ಲಿಕೆ ನಡುವಿನ ಸಮಯದ ಅಂತರವು 1 ತಿಂಗಳ ಮೇಲಾಗದಂತೆ ಮತ್ತು ಕ್ಲೇಮುಗಳ ಮತ್ತು ಮುಂದಿನ ಕಂತಿನ ಬಿಡುಗಡೆಗಳನ್ನು ಭಾರತ ಸರ್ಕಾರ/ಸಂಬಂಧಿತ ನಿಧಿಪೂರೈಕೆ ಏಜೆನ್ಸಿಗಳೊಂದಿಗೆ ತ್ವರಿತವಾಗಿ ಹಿಂಬಾಲಿಕಾ ಕ್ರಮ ವಹಿಸಬೇಕಾಗುತ್ತದೆ.

ವೈಯಕ್ತಿಕ ಠೇವಣಿ ಖಾತೆ/ಬ್ಯಾಂಕ್ ಖಾತೆ

32. ಸಹಾಯಾನುದಾನಗಳಿಗೆ ನೀಡುವ ಅನುದಾನಗಳನ್ನು ಹೊರತುಪಡಿಸಿ ಆರ್ಥಿಕ ಇಲಾಖೆಯ ನಿರ್ದಿಷ್ಟ ಅನುಮೋದನೆ ಪಡೆಯದೆ ಯಾವುದೇ ಯೋಜನೆಯ ಮೊತ್ತವನ್ನು ವೈಯಕ್ತಿಕ ಠೇವಣಿ ಖಾತೆಗೆ ಅಥವಾ ಬ್ಯಾಂಕ್ ಖಾತೆಗೆ ಜಮೆ ಮಾಡುವಂತಿಲ್ಲ.

33. ಅನುಷ್ಠಾನ ಸಂಸ್ಥೆಯ/ ಅಧಿಕಾರಿಯ ಬ್ಯಾಂಕ್ ಖಾತೆ ಅಥವಾ ವೈಯಕ್ತಿಕ ಠೇವಣಿ ಖಾತೆಗೆ ಒಂದು ನಿರ್ದಿಷ್ಟ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಣವನ್ನು ಜಮೆ ಮಾಡಲು ಆರ್ಥಿಕ ಇಲಾಖೆಯ ಅನುಮೋದನೆ ಪಡೆದಿದ್ದರೂ ಸಹ, ಅದನ್ನು ಆರ್ಥಿಕ ಪ್ರತ್ಯಾಯೋಜನೆಯ ಅಧಿಕಾರವನ್ನು ಚಲಾಯಿಸುವುದರಿಂದ ವಿನಾಯಿತಿ ಎಂದು ಪರಿಭಾವಿಸುವಂತಿಲ್ಲ. ಆದೇಶ ಸಂಖ್ಯೆ: ಆಇ 5 ಟಿಎಆರ್ 2017 ದಿನಾಂಕ:30.1.2017ರಲ್ಲಿ ವಿಧಿಸಿರುವ ಷರತ್ತು ಹಾಗೂ ಸೂಚನೆಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ಆಡಳಿತ ಇಲಾಖೆಗಳು ತಪ್ಪದೇ ಖಚಿತಪಡಿಸಿಕೊಳ್ಳುವುದು.

34. ಕೇಂದ್ರ ಅಥವಾ ರಾಜ್ಯದ ಯಾವುದೇ ಕಾರ್ಯಕ್ರಮದಡಿ ವೈಯಕ್ತಿಕ ಠೇವಣಿ ಖಾತೆ/ಬ್ಯಾಂಕ್ ಖಾತೆಯ ಮುಖಾಂತರ **ನಿರ್ವಹಿಸಲು ಆರ್ಥಿಕ ಇಲಾಖೆಯಿಂದ ನಿರ್ದಿಷ್ಟ ಅನುಮತಿ ಪಡೆದಂತಹ ಯೋಜನೆಗಳ ಅನುಷ್ಠಾನ ಅಧಿಕಾರಿಗಳಿಗೆ** ಹಣ ಬಿಡುಗಡೆ ಮಾಡಬೇಕಾದಲ್ಲಿ, ಹಿಂದೆ ಬಿಡುಗಡೆಯಾದ ಹಣದಲ್ಲಿ, ಅನುಷ್ಠಾನ ಸಂಸ್ಥೆ/ಅಧಿಕಾರಿಯ ವೈಯಕ್ತಿಕ ಠೇವಣಿ ಖಾತೆ/ಬ್ಯಾಂಕ್ ಖಾತೆಯಲ್ಲಿನ ಆರಂಭಿಕ ಶಿಲ್ಕನ್ನೂ ಒಳಗೊಂಡಂತೆ, ಈವರೆಗೆ ಬಿಡುಗಡೆ ಮಾಡಿರುವ ಹಣದಲ್ಲಿ ಶೇ.75 ರಷ್ಟು ಹಣವನ್ನು ಉಪಯೋಗಿಸಿಕೊಂಡಿರುವುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು. ಹಣ ಬಿಡುಗಡೆಯ ಸರ್ಕಾರಿ ಆದೇಶವು ಈ ಕೆಳಕಂಡ ಅಂಶಗಳನ್ನು ತಪ್ಪದೇ ಒಳಗೊಳ್ಳತಕ್ಕದ್ದು ಹಾಗೂ ಈ ಅಂಶಗಳನ್ನು ನಮೂದಿಸದೇ ಇದ್ದಲ್ಲಿ ಖಜಾನೆಯು ಅಂತಹ ಆದೇಶಗಳನ್ನು ಅಂಗೀಕರಿಸುವುದಿಲ್ಲ.

- ಆರಂಭಿಕ ಶಿಲ್ಕು
- ಇತ್ತೀಚಿನ ಸರ್ಕಾರಿ ಆದೇಶದವರೆಗೆ ಮಾಡಿದ ಬಿಡುಗಡೆಗಳು

- ಲಭ್ಯವಿರುವ ಒಟ್ಟು ಮೊತ್ತ
- ಆಗಿರುವ ವೆಚ್ಚ
- ಲಭ್ಯವಿರುವ ಮೊತ್ತಕ್ಕೆ ಶೇಕಡಾವಾರು ವೆಚ್ಚ

ಆರ್ಥಿಕ ಇಲಾಖೆಗೆ ಮಾಹಿತಿ:

35. ಆಡಳಿತ ಇಲಾಖೆಗಳು ಈ ಆರ್ಥಿಕ ಪ್ರತ್ಯಾಯೋಜನೆಗಳನ್ವಯ ಹೊರಡಿಸುವ ಹಣ ಬಿಡುಗಡೆ ಆದೇಶದ ಪ್ರತಿಗಳನ್ನು ತಪ್ಪದೇ ಆರ್ಥಿಕ ಇಲಾಖೆಯ ಸಂಬಂಧಿತ ವೆಚ್ಚ ಶಾಖೆಗಳಿಗೆ ಕಳುಹಿಸುವುದು.

ಖಜಾನೆ ಇಲಾಖೆಯ ಪಾತ್ರ:

36. ಮೇಲೆ ತಿಳಿಸಿದಂತೆ ಸರ್ಕಾರಿ ಆದೇಶವನ್ನು ಹೊರಡಿಸಲಾಗಿರುವುದನ್ನು ಮನಗಂಡ ಹೊರತು ಖಜಾನೆ ಇಲಾಖೆಯು ಆಡಳಿತ ಇಲಾಖೆಗಳು ಸಲ್ಲಿಸುವ ಬಿಲ್ಲುಗಳನ್ನು ಅಂಗೀಕರಿಸತಕ್ಕದ್ದಲ್ಲ ಅಥವಾ ಹಣ ಬಿಡುಗಡೆ ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

Ekroop Caur

(ಡಾ.ಏಕ್‌ರೂಪ್ ಕೌರ್)
ಸರ್ಕಾರದ ಕಾರ್ಯದರ್ಶಿ (ಆ.ಮತ್ತುಸಂ.)
ಆರ್ಥಿಕ ಇಲಾಖೆ.

ಇವರಿಗೆ,

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಜಿಎಸ್‌ಎಸ್‌ಎ), ರೆಸಿಡೆನ್ಸಿ ರಸ್ತೆ, ಅಂಚೆ ಪಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಇ.ಆರ್.ಎಸ್.ಎ) ರೆಸಿಡೆನ್ಸಿ ರಸ್ತೆ, ಅಂಚೆ ಪಟ್ಟಿಗೆ 5329/5369, ಕರ್ನಾಟಕ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
9. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

10. ಸರ್ಕಾರದ ಎಲ್ಲಾ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು
11. ಆರ್ಥಿಕ ಇಲಾಖೆಯ ಎಲ್ಲಾ ಶಾಖೆಗಳಿಗೆ
12. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
13. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು.
14. ಬಿಡಿ ಪ್ರತಿ / ಶಾ.ರ.ಕ.

FY 2020-21

Annexure - 1

List of HOAs for which Finance Department's Prior Concurrence is necessary for release for funds

Demand Number and Department Name		HOA	Description
01-Agriculture		2401-00-800-1-05	Pradhan Mantri Kisan Samman Yojane
01-Horticulture		2401-00-800-2-48	Krishi Bhagya (Horticulture)
02-Animal Husbandry		2403-00-101-0-06-103	Institute of Animal Health and Veterinary Biologicals and Clinical Laboratories, Bangalore
		4403-00-101-0-11	Education Extension and Research-KVAFSU,Bidar
		4403-00-102-1-03	Construction and Maintenance of Veterinary Institution Building
05-Home		2055-00-115-0-01	Scheme for Modernisation of Police Force
	CSS	2055-00-116-0-03	Setting up of Cyber Forensic Lab cum Training Centre towards implementation of CCPWC and other facilities under Nirbhaya Fund
		4055-00-051-0-01	Upgradation & Construction of Police Public Schools in Divisional Headquarters
		4055-00-207-0-04	Construction of Police Office Buildings , Other Buildings and Infrastructure Facilities
		4055-00-211-0-01	KSPHC - Construction of Police Quarters - Mega Police Housing 2020
		4059-80-051-0-13	Construction of Prisons
		4059-80-051-0-41	K.S.A.F.E
	CSS	4059-80-052-0-02	Modernisation of Prisons
		4070-00-003-0-01	Home Guards Training Centre
		4216-01-700-2-10	Jails Quarters
05-Transport		3055-00-001-0-01	Installation of CCTVs in buses under NIRBHAYA Fund(CSS)
		3055-00-190-0-02	Free Bus Pass Facility to Freedom Fighters
		3055-00-190-0-03	Bangalore Metropolitan Transport Corporation
		3055-00-190-0-04	North West Karnataka Regional Transport Corporation
		3055-00-190-0-05	North East Karnataka Regional Transport Corporation
		3055-00-190-0-06	Free Bus Travel Facility to the Blind
		3055-00-190-0-07	Free Bus Travel Facility to the Handicapped
		3055-00-190-0-08	Free Bus Pass To Widows Of Freedom Fighters
		3055-00-190-0-09	Concessional Bus Travel Facility to Senior Citizens
		3055-00-190-0-10	Subsidy Towards Students & Other Concessions Extended by KSRTC
		3055-00-190-0-11	Issue of Free Bus Passes to the dependents of Martyrs
		3055-00-190-0-12	Amount Paid to Operators of Contract Carriage Acquired by Government
		3055-00-190-0-13	Free Bus Travel Facility to Endosulphan affected
		3055-00-190-0-14	Free Bus Pass Facility to Goa Activists
		3055-00-800-0-15	Auto Drivers Welfare Scheme
		4059-80-051-0-34	RTO Building and Test Driving Track
		5055-00-102-3-01	Purchase of New Buses
		5055-00-190-1-00	Karnataka State Road Transport Corporation
		5055-00-190-2-00	North West Karnataka Road Transport Corporation
		5055-00-190-3-00	Bangalore Metropolitan Transport Corporation
		5055-00-190-4-00	North East Karnataka Road Transport Corporation
06-Infrastructure		5465-01-190-1-05	Development of Minor Air Ports
		5465-01-190-1-20	Karnataka Viability Gap
		5465-01-190-2-05	Alternate Roads

Demand Number and Department Name		HOA	Description
		5465-01-190-3-04	KRIDE - ROB/RUB Projects
		5465-01-190-3-05	Cost Sharing Railway Projects
07- Rural Development & Panchayati Raj		2215-01-197-2-01	Block Grants
		2515-00-101-0-11	Elections to Zilla Parishads & Mandal Panchayats
		2515-00-101-0-24	RDPR Computerisation
		2515-00-101-0-30	Pradhan Mantri Grama Sadak Yojane-Road
		2515-00-101-0-31	Rashtriya Gram Swaraj Abhiyan (RGSA)
		2515-00-102-0-08	Management Support to Rural Development Programme and Strengthening District Planning
		2515-00-196-1-14	Construction of Panchayat Raj Institution Buildings
		2515-00-196-1-22	Development Grants
		2515-00-198-1-10	Royalty on Sand Mining to be Passed on to Gram Panchayaths
		4215-01-102-2-01	Rural Water Supply and Jaladhare
		4215-02-800-0-02	Mukhya Mantri Grama Vikasa
		4702-00-101-1-14	Repairs & Rejuvenation of Tanks - RDPR
		5054-03-337-0-75	Grameena Sumargha (including Namma Grama Namma Raste Scheme (NGNRY))
09-Cooperation		2425-00-107-2-56	Loan Waiver for Farmers- Short Term Loans taken from Cooperative Societies/Cooperative Banks
		3475-00-107-0-20	Minimum Floor Price Scheme
		2425-00-108-0-76	Grants to Malaprabha Co-operative Oill Mills Ltd., Nargund
		5475-00-102-2-01	Improvement of Rural Market - NABARD
10-BC Welfare		2225-03-001-0-05	Vividha Samudayagala Abhivridhi
		2225-03-102-2-13	Arya Vysya Niagama
		2225-03-190-0-04	D. Devaraja Urs Backward Classes Development Corporation Limited.
		2225-03-190-0-05	Vishwakarma Abhivruddhi Nigama
		2225-03-190-0-06	Krantiveera Sangolli Rayanna Prathistana
		2225-03-190-0-07	Assistance to Nijasharana Ambigara Chowdaiah Development Corporation Ltd.
		2225-03-190-0-08	Assistance to Karnataka Uppara Development Corporation Ltd.
		2225-03-277-2-37	Training, Awareness and Incentives to BC Students
	CSS	2225-03-277-2-51	Post-Matric Scholarship to Backward Classes Students
	CSS	2225-03-277-2-52	Pre-Matric Scholarship to Backward Classes Students
		2225-03-277-2-62	Starting and Maintenance of New Morarji Desai Residential Schools for Backward Classes(KREIS)
		2225-03-283-0-03	Food and Accomodation Assistance-Vidyasiri
		4225-03-190-0-06	Karnataka Uppara Development Corporation Ltd.
		4225-03-190-0-07	Nijasharana Ambigara Chowdaiah Development Corporation Ltd
		4225-03-190-0-08	Nomadic Tribe Corporation
		4225-03-277-2-04	Construction of Residential Schools - Navodaya Pattern
		4225-03-277-2-06	Construction of Hostel Buildings(BCW Department)
		4225-03-277-2-11	NABARD works 2019-20
		4225-03-277-2-12	Vishwakarma Sculpture Institute at Shivarapatna
		4225-03-283-0-01	Construction of Devraj Urs Bhavan(Taluk Office)
		4225-03-800-0-05	Constructions of Alemari Jananga Samudaya Bhavana
		2225-04-277-0-04	Scholarship for Minorities and Fee Reimbursement
		2225-04-277-0-05	Vidyasiri Scheme for Minority Students

Demand Number and Department Name		HOA	Description
10-Minority Welfare		4225-04-102-0-01	Minority Slums/Colony Development Programme in 11 Corporations
		4225-04-190-0-02	Karnataka Minorities Development Corporation
		4225-04-190-0-03	Construction of Hostel and Residential School Buildings for Minorities, Minority Office Complexes , Urdu Convention and Cultural Centre
10-SC Welfare		2225-01-102-0-11	Community Irrigation Scheme - Ganga Kalyana
		2225-01-190-2-01	Self Employment Scheme
		2225-01-190-2-09	Micro Credit to S.Cs through Self Help Gruops (SHGs)
		2225-01-190-2-10	Development of Banjara Community
		2225-01-190-3-01	Karnataka Adi Jambava Development Corporation
		2225-01-190-4-01	Welfare Schemes(Bhovi Development Corporation)
	CSS	2225-01-197-6-03	Post-Matric Scholarships to SCs
		2225-01-277-0-19	Repairs to hostels and Residential Schools(KREIS)
		2225-01-277-0-53	Residential School Society
		2225-01-277-0-65	Maintenance of Residential Schools (MDRSs)(KREIS)
	CSS	2225-01-277-0-66	Conducting Seminars and Workshops
	CSS	2225-01-277-0-67	Eradication of Untouchability
		2225-01-283-0-10	Dr. B.R.Ambedkar Housing Scheme(through RGHCL)
		2225-01-793-0-01	Schemes implemented under - Special Central Assistance for Scheduled Castes Component Plan
	CSS	2225-01-796-0-01	Compensation to SC/ST Victims
		2225-01-796-0-02	Various Development Programme for Schedule Caste
		4225-01-190-0-03	Micro Credit to S.Cs through Self Help Gruops(SHGs)
		4225-01-190-0-05	Babu Jagjivan Ram Leather Industries Development Corporation
